ಬರ್ತ್‌ಡೇಗೆ ಬರ್ತಾನಷ್ಟೆ' ಎಂದವರನ್ನು ದೀರ್ಘವಾಗಿ ನೋಡಿ ನಿಟ್ಟುಸಿರೊಂದನ್ನು ಸುಯ್ದು, 'ಅದು ಹಾಗಲ್ಲ ವಿಲಿಯಂ... ಅವನು ಇಲ್ಲಿಗೆ ಸದಾ ಬರ್ತಾನೆ ಅಂತಲ್ಲ. ಇವಳು ವರ್ಷಕ್ಕೆರಡು ಮೂರು ಸಲ ಮೈಸೂರಿಗೆ ಹೋಗ್ತಾಳಲ್ಲ ನಿಮ್ಮಪ್ಪ ಅಮ್ಮನ ಮನೆಗೆ' ಎಂದಳು ಅಸಹನೆಯಿಂದ. 'ಅದಕ್ಕೇನು ಸೂಸಿ? ಸೋವಾಟ್? ಅವಳನ್ನು ಕಂಡ್ರೆ ಅಮ್ಮನಿಗೆ ಪ್ರಾಣ. ಇವಳಿಗು ಅಲ್ಲಿ ಹೋಗೋದಂದ್ರೆ ತುಂಬ ಇಷ್ಟ. ಹೋಗಲಿ ಬಿಡು. ಇನ್ನೆಷ್ಟು ಕಾಲ ಇರ್ತಾರೆ ನಮ್ಮಪ್ಪ ಅಮ್ಮ?' ಎಂದ. 'ಹೋದಾಗ ಅಲ್ಲಿ ಮೂರ್ತಿ ಸಿಗ್ತಾನೆ' ಎಂದಳು. 'ಇವಳು ಹೋಗ್ತಾಳೆ ಅಂತ ಅವನು ಮನೆ ಬಿಟ್ಟು ಹೋಗಕ್ಕಾಗತ್ತ? ಆಫ್ಟ್ರಾಲ್ ಹಿ ಈಸ್ ಅವರ್ ನೇಬರ್. ಚಿಕ್ಕ ವಯಸ್ಸಿಂದ ಅವರಿಬ್ರು ಫ್ರೆಂಡ್ಸ್... ದೆ ಗೆಟ್ ಅಲಾಂಗ್ ವೆಲ್, ಅದಕ್ಕೇನೀಗ?' ಅಂದರು ತುಸು ಪೆಡಸಾಗಿ. ಧಡಾರನೆ ಎದ್ದ ಸೂಸನ್, 'ಅಯ್ಯೋ... ಎಲ್ಲ ಬಿಟ್ಟು ನಿಮ್ಮತ್ರ ಹೇಳ್ತೀನಲ್ಲ. ನಿಮ್ಗೆ ಏನೂ ಅರ್ಥವಾಗಲ್ಲ' ಎನ್ನುತ್ತಾ ದುರ್ದಾನ ತೆಗೆದುಕೊಂಡಂತೆ ಒಳಹೋದಳು.

ಅವಳ ಆತಂಕಕ್ಕೆ ಕಾರಣವೂ ಇಲ್ಲದಿರಲಿಲ್ಲ. ಅವಳ ಅತ್ತೆಮಾವ ಜಾನ್ ಪೆರೇರಾ – ಎಲ್ಸಿ ಪೆರೇರಾ ಮೈಸೂರಿನಲ್ಲಿದ್ದರು. ಜಾನ್ ಪೆರೇರಾರ ತಾತ ಬ್ರಿಟಿಷರ ಕಾಲದಲ್ಲಿ ಆಕ್ಸ್‌ಫರ್ಡಿಂದ ವಲಸೆ ಬಂದ ವಿದ್ಯಾವಂತ ಕುಟುಂಬ. ಅದಾಗಿ ಮೂರನೇ ತಲೆಮಾರಿನವರು ಜಾನ್ ಪೆರೇರಾ. ಅವರು ದೊಡ್ಡ ಸರ್ಕಾರಿ ಹುದ್ದೆಯಲ್ಲಿದ್ದವರು. ಅವರ ಸೇವಾವಧಿಯಲ್ಲಿ ಮಾಡಿದ ಮನೆಯದು. ಹೆಸರಿಗೆ ಆಂಗ್ಲೋಇಂಡಿಯನ್ನರಾದರೂ ಇಲ್ಲಿಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ಕುಟುಂಬ. ಚಿಕ್ಕು, ಪೇರಲೆ, ಹಲಸು, ಮಾವು, ಸಂಪಿಗೆ ಮರಗಳಿದ್ದ ಮೈಸೂರಿನ ಮನೆಯೆಂದರೆ ರೋಸ್‌ಗೆ ಅಚ್ಚುಮೆಚ್ಚು. ಸದಾ ಅಲ್ಲಿಗೆ ಓಡಲು ತುದಿಗಾಲಲ್ಲಿ ನಿಂತಿರುತ್ತಿದ್ದಳು. ದೊಡ್ಡ ಆವರಣ, ವಿಶಾಲ ಗೇಟಿನಿಂದ ಮನೆಯ ಮುಂಬಾಗಿಲಿನವರೆಗೆ ಕಲ್ಲು ಹರಡಿದ ಕಾಲು ಹಾದಿ, ವರಾಂಡ, ವಿಶಾಲ ಹಜಾರ, ಗಾಳಿ ಬೆಳಕಾಡುವ ಐದಾರು ಕೋಣೆಗಳು, ಅನುಕೂಲವಾದ ಅಡಿಗೆ ಮನೆ, ಹಿತ್ತಲು, ಬಚ್ಚಲುಗಳಿದ್ದ ಆ ಮನೆಯಲ್ಲಿ ಆರು ಮಕ್ಕಳೊಂದಿಗಿನ ದೊಡ್ಡ ಸಂಸಾರ. ಮಕ್ಕಳು ದೊಡ್ಡವರಾಗಿ ಮದುವೆಗಳಾಗಿ ಬೇರೆ ಬೇರೆ ಊರುಗಳಲ್ಲಿ ನೆಲೆ ನಿಂತ ಮೇಲೆ ವರ್ಷಕ್ಕೊಮ್ಮೆ ಕ್ರಿಸ್‌ಮಸ್‌ಗೆ ಆ ಮನೆಯಲ್ಲಿ ಸೇರುವುದನ್ನು ಬಿಟ್ಟರೆ ಸದಾ ಎಲ್ಲರೂ ಒಟ್ಟಾಗಿ ಅಲ್ಲಿ ಹೋದದ್ದು ಕಡಿಮೆಯೇ. ಆರು ಮಕ್ಕಳು, ಒಂಬತ್ತು ಮೊಮ್ಮಕ್ಕಳ ಪೈಕಿ ಎರಡನೇ ಮಗಳು ಜೂಡಿ ಅಕಾಲ ಮರಣಕ್ಕೆ ಸಿಲುಕಿದ್ದೊಂದು ನೋವು. ಒಟ್ಟಿಗೆ ಎಲ್ಲರೂ ಬಂದರೆ ವೃದ್ಧ ಎಲ್ಸಿಗೆ ಜೀಸಸ್‌ನ ಸ್ವರ್ಗವೇ ತನ್ನ ಮನೆಗೆ ಇಳಿದಷ್ಟು ಸಂಭ್ರಮ. ಆ ದಿನಗಳಲ್ಲಿ ಹೊತ್ತಿಗೊಂದು ಅಡುಗೆ ಮಾಡುತ್ತಿದ್ದಳು. ಈಚಿನ ದಿನಗಳಲ್ಲಿ ಅಡುಗೆಯವಳನ್ನು ಸಹಾಯಕ್ಕೆ ಇಟ್ಟುಕೊಂಡಿದ್ದಾರೆ. ಮೂರನೇ ಮಗನ ಒಬ್ಬಳೇ ಮಗಳು ರೋಸ್‌ಳನ್ನು ಕಂಡರೆ ಅಜ್ಜಿಗೆ ಮೈಯೆಲ್ಲ ಜೀವ. ಅವಳೊಳಗಿನ ಮಾತೃತ್ವ ಜಾಗೃತವಾಗಲು ಕಾರಣವೂ ಇತ್ತು. ತನ್ನ ಮುದ್ದಿನ ಮೊಮ್ಮಗಳು ರೂಬಾರೂಬು ತನ್ನ ಗತಿಸಿದ ಮಗಳು ಜೂಡಿಯಂತೆಯೇ ಇದ್ದಾಳೆಂದು. ಮೊಮ್ಮಗಳಿಗೂ ಅಷ್ಟೇ... ಅಜ್ಜಿಯ ಮನೆ, ತಾತನ ಜೊತೆಯೆಂದರೆ ಕೊಂಡಾಟ. ಶಿಸ್ತಿನಲ್ಲಿ ಬೆಳೆಸಿದ್ದ ಅಮ್ಮನ ಹಂಗಿರದೆ ಅಜ್ಜಿಯ ಕೊಂಡಾಟ, ತಾತನ ಅಚ್ಚೆಗೆ ಅವಳ ಬೆಣ್ಣೆಯಂತಹ ಮನಸ್ಸು ಕರಗಿ ಹೋಗುತ್ತಿತ್ತು. ಬೆಂಗಳೂರಿನ ಫ್ಲಾಟಿನ ಜೀವನಕ್ಕೆ ಒಗ್ಗಿದ್ದವಳಿಗೆ ಆಕಾಶ, ಭೂಮಿ, ಗಿಡ, ಹೂವುಗಳ ಜೊತೆಗೆ ಸ್ವಚ್ಛಗಾಳಿಯ ಆವರಣದಲ್ಲಿ ಆಟವಾಡುತ್ತಾ ಕಳೆಯುತ್ತಿದ್ದ ಅವಳ ಶಾಲಾ ರಜೆಗಳು ಬೇಗನೇ ಕಳೆದುಹೋಗುತ್ತಿವೆ ಅನ್ನಿಸಿ ಮತ್ತೊಂದು ರಜೆಗೆ ಎದುರು ನೋಡುತ್ತಿದ್ದಳು. ಆ ಮನೆಯಲ್ಲಿ ಕೆಲ ಬಾರಿ ಅತ್ತೆಯಂದಿರ ಮಕ್ಕಳು, ಚಿಕ್ಕಪ್ಪ ದೊಡ್ಡಪ್ಪರ ಮಕ್ಕಳ ಜೊತೆಯಾಗುತ್ತಿತ್ತು. ಆದರೆ... ಯಾವಾಗಲೂ ಜೊತೆಯಾಗುತ್ತಿದ್ದುದು ಪಕ್ಕದ ಮನೆಯ ಮೂರ್ತಿ. ಕಮಲಮ್ಮ, ದಿವಾಕರ ದಂಪತಿಯ ಎರಡನೇ ಮಗ. ಹೆಚ್ಚೂ ಕಡಿಮೆ ಅವಳ ಓರಗೆಯವನೆ. ಚಿಕ್ಕಂದಿನಿಂದ ಅವನ ಜೊತೆ ಆಟವಾಡಿ ಬೆಳೆದ